ಪ್ರಕಟಣೆಗಳು

ಅಧ್ಯಕ್ಷರು.—ಈಗ ಇಲ್ಲಿ ಕೆಲವು ಪ್ರಕಟಣೆಗಳು ಇವೆ. ಅದನ್ನು ನಾನು ಈ ಸಭೆಗೆ ತಿಳಿಸಬಯಸುತ್ತೇನೆ.

"ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ೯ನೇ ನಿಯಮದ ಮೇರೆಗೆ ನಾನು ಈ ಕೆಳಕಂಡ ೬ ಜನ ಸದಸ್ಯರನ್ನು ಅಧ್ಯಕ್ಷತೆ ವಹಿಸುವವರ ಹೆಸರುಗಳ ಪಟ್ಟಿಯಲ್ಲಿ ಸೇರಿಸಿ ಅವರನ್ನು ನಾಮ ನಿರ್ದೇಶನ ಮಾಡಿರುತ್ತೇನೆ.

ಶ್ರೀಯುತರುಗಳಾದ.—

೧. ಶ್ರೀ ಬಿ. ಜಿ. ಬಣಕಾರ್

೨. ಶ್ರೀ ಎನ್. ಹುಚ್ಚಮಾಸ್ತಿಗೌಡ

೩. ಶ್ರೀಮತಿ ಕೆ. ಎ. ನಾಗರತ್ನಮ್ಮ

೪. ಹೆಚ್. ಗಂಗಾಧರನ್

೫. ಗೋವಿಂದ ಪಿ. ಒಡೆಯರಾಜ್

೬. ಪಿ. ರಾಮದೇವ್

"ಜನತಾ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಪಕ್ಷೇತರ ಸದಸ್ಯರಾದ ಶ್ರೀ ಉಗ್ರನರಸಿಂಹಪ್ಪನವರನ್ನು ಜನತಾ ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆಯೆಂದು ನನಗೆ ಮೂರನೇ ಮಾರ್ಚ್ ೧೯೮೩ರಂದು ಪತ್ರವನ್ನು ಬರೆದು ತಿಳಿಸಿದ್ದಾರೆ ಈ ಬಗ್ಗೆ ಶ್ರೀ ಉಗ್ರನರಸಿಂಹಪ್ಪನವರೂ ಸಹ ನನಗೆ ಒಂದು ಪತ್ರವನ್ನು ಬರೆದು ಅವರು ಜನತಾ ಪಕ್ಷಕ್ಕೆ ಸೇರಿಕೊಂಡಿದ್ದೇನೆಂದು ತಿಳಿಸಿದ್ದಾರೆ.

ಆದುದರಿಂದ ಅವರಿಗೆ ಆಡಳಿತ ಪಕ್ಷದ ಸದಸ್ಯರ ಜೊತೆಗೆ ಕುಳಿತುಕೊಳ್ಳಲು ಪೀಠದ ವ್ಯವಸ್ಥೆಯನ್ನು ಮಾಡಲಾಗಿದೆ.

ಕಾಮನ್‌ವೆಲ್ತ್ ದಿನಾಚರಣೆಯ ಸಂದೇಶ

ಲಂಡನ್ನಿನಲ್ಲಿರುವ ಕಾಮನ್‌ವೆಲ್ತ್ ಸಂಸದೀಯ ಸಂಘದ ಕೇಂದ್ರ ಸಚಿವಾಲಯದ ಕಾರ್ಯ ನಿರ್ವಾಹಕ ಸಮಿತಿಯ ಅಧ್ಯಕ್ಷರಿಂದ ನಾನು ಪಡೆದ ಸಂದೇಶವು ಈ ಕೆಳಕಂಡಂತಿದೆ.

ಈ ಅಪೂರ್ವ ಸಭೆಯ ಮೌಲ್ಯಗಳ ಮೇಲೆ ಗಮನವನ್ನು ಹರಿಸಲು ಈ ಕಾಮನ್‌ವೆಲ್ತ್ ದಿನಾಚರಣೆಯು ಸೂಕ್ತ ಸಂದರ್ಭವಾಗಿದೆ. ಸ್ನೇಹ ಹಾಗೂ ಸಮಾನತೆಯ ಆಧಾರಗಳ ಮೇಲೆ ನಿರ್ಮಿಸಿದ ವಿಶ್ವದ ಒಂದು ಸಾವಿರ ದಶಲಕ್ಷ ಜನತೆಯ ಪ್ರತಿನಿಧಿಗಳ ಸಂಸ್ಕೃತಿ ಹಾಗೂ ಧರ್ಮಗಳು ಈ ಸಮಾಜದ ಅಮೂಲ್ಯ ಅಂಗ. ಆಸಕ್ತಿ ಹಾಗೂ ಸಹಕಾರಗಳ ಪ್ರಮುಖ ಸೇವೆಯಿಂದಾಗಿ ದೊಡ್ಡ ಹಾಗೂ ಸಣ್ಣ ಅಭಿವೃದ್ಧಿಶೀಲ ಹಾಗೂ ಅಭಿವೃದ್ಧಿ ಪೊಂದುತ್ತಿರುವ ನಲವತ್ತೇಳು ರಾಷ್ಟ್ರಗಳ ಈ ಒಕ್ಕೂಟವು ಒಂದು ಜಾಲವಾಗಿದೆ. ಇವುಗಳನ್ನು ಶಿಕ್ಷಣ, ಆರೋಗ್ಯ, ಅಭಿವೃದ್ಧಿ ಕಾನೂನು ಹಾಗೂ ಸಂಸದೀಯ ಸಂಸ್ಥೆಗಳಲ್ಲಿ ವ್ಯಕ್ತಪಡಿಸಲಾಗಿದೆ.

ನಮ್ಮ ಸಂಘವು ಸಂಸದೀಯ ಪ್ರಜಾಪ್ರಭುತ್ವದ ನಿರ್ದಿಷ್ಟ ಮಾದರಿಗಳ ವಿಶಿಷ್ಟವಾದ ಕೊಡಿಗೆಯನ್ನು ಕಾಮನ್‌ವೆಲ್ತ್ ಸಂಘಕ್ಕೆ ಕೊಡುವುದನ್ನು ಮುಂದುವರಿಸಿಕೊಂಡು ಹೋಗುವುದು. ಇದರ ಅಂಗ ಸಂಸ್ಥೆಗಳಾದ ಸಂಸತ್ತು ರಾಜ್ಯ ವಿಧಾನ ಮಂಡಲಗಳು ಹಾಗೂ ಪ್ರಜೆಗಳಾದ ನಾವು ಅದನ್ನು ಪ್ರತಿನಿಧಿಸುತ್ತೇವೆ ಹಾಗೂ ಸೇವೆ ಸಲ್ಲಿಸುತ್ತೇವೆ.

ಸಂಸ್ಥೆಯ ಬೆಳವಣಿಗೆಗೆ, ಅದರ ಕಾರ್ಯ ಚಟುವಟಿಕೆಗಳ ವೈವಿಧ್ಯತೆಗೆ ಹಾಗೂ ಯಾವಾಗಲೂ ಸಂಸ್ಥೆಯ ಗುರಿಗಳನ್ನು ಮತ್ತು ಉದ್ದೇಶಗಳನ್ನು ಮುಂದುವರಿಸಿಕೊಂಡು ಹೋಗಲು ಕಾಮನ್‌ವೆಲ್ತ್ ರಾಷ್ಟ್ರಗಳ ಪರಸ್ಪರ ಹೊಂದಾಣಿಕೆ ಹಾಗೂ ಸಹಕಾರಗಳನ್ನು ತೀವ್ರಗೊಳಿಸಲು ಕಾನೂನಿನ ನಿಯಮಗಳನ್ನು ವೈಯಕ್ತಿಕ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸಲು, ಸಂಸದೀಯ ಸಂಸ್ಥೆಗಳನ್ನು ಅಭ್ಯಸಿಸಲು ಹಾಗೂ ಗೌರವಿಸಲು ಉತ್ತೇಜನ ನೀಡಲು ಕಳೆದ ಕೆಲವು ವರ್ಷಗಳಿಂದ ಕಾಮನ್‌ವೆಲ್ತ್ ಸಂಸದೀಯ ಸಂಘದ ಚಾಲ್ತಿ ಬಂಡವಾಳವು ಸಹಾಯಕವಾಗಿದೆ.

ಬದಲಾಗುತ್ತಿರುವ ಈ ಪ್ರಪಂಚದಲ್ಲಿ ನಮ್ಮ ಸಂಘವು ತನ್ನ ಮುಂದಿನ ಗುರಿಯನ್ನು ಹೇಗೆ ಸಾಧಿಸುತ್ತದೆಂಬುದನ್ನು ನಾವು ಪರೀಕ್ಷಿಸುವುದರಿಂದ ಸ್ನೇಹ ಸಮಾನತೆ, ಸಂಸದೀಯ ಪ್ರಜಾಪ್ರಭುತ್ವ ಮುಂತಾದ ನಮ್ಮ ಸಂಸ್ಥೆಯ ವಾಸ್ತವಿಕ ಮೌಲ್ಯಗಳನ್ನು ಪುನರ್ ದೃಢೀಕರಿಸಿಕೊಳ್ಳೋಣ. ಈ ಮೌಲ್ಯಗಳು ನಮ್ಮ ಸಂಘದ ಹಿಂದಿನ ಗುಣಗಾನವನ್ನು ಹೊಂದದೆ ಹಾಗೂ ಮುಂದಿನ ಬೆಳವಣಿಗೆ ಹಾಗೂ ಶಕ್ತಿಯ ಭರವಸೆಗಳಾಗಿವೆ.

ಮನವಿಗಳು

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈ ಜನತಾ ಸರ್ಕಾರದವರು ಹಾಗೂ ಜನತಾ ಪಕ್ಷಕ್ಕೆ ಸಂಬಂಧಪಟ್ಟವರು ಪಕ್ಷಾಂತರಕ್ಕೆ ವಿರೋಧವಾದ ಶಾಸನವನ್ನು ತರುತ್ತೇವೆಂದು ಭಾಷಣ ಮಾಡತಕ್ಕಂಥ ಜನ ಇವರು, ಆದರೆ ಇವತ್ತು ಪಕ್ಷಾಂತರಕ್ಕೆ ಅವರೇ ಪದಾರ್ಪಣ ಮಾಡಿದ್ದಾರೆ ಇದಕ್ಕಿಂತ ಹೆಚ್ಚಿನ ನಾಚಿಕೆಗೇಡಿನ ವಿಚಾರ ಬೇರೆ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮಗೆ ನೀವು ಈ ಸಂದರ್ಭದಲ್ಲಿ ಉಪದೇಶ ಮಾಡುವ ಅವಶ್ಯಕತೆ ಇಲ್ಲ. ಈಗ ಯಾರೂ ಪಕ್ಷಾಂತರ ಮಾಡಿಲ್ಲ. ಪಕ್ಷಾಂತರದ ಪದದ ಅರ್ಥ ತಮಗೆ ಗೊತ್ತಿಲ್ಲ. ಈಗ ನೀವು ಹೇಳಿದ್ದು ಭೂತ ಗೀತೋಪದೇಶ ಮಾಡಿದ ಹಾಗೆ ಇದೆ.

ಶ್ರೀ ಎಂ. ರಘುಪತಿ.—ಮಾನ್ಯ ವೀರಪ್ಪ ಮೊಯ್ಲಿಯವರೇ ಈ ಬಗ್ಗೆ ವಿಷಯ ಏನು ಎಂಬುದು ನಿಮಗೆ ಗೊತ್ತಿಲ್ಲ. ವಿಷಯ ಗೊತ್ತಿಲ್ಲದೇ ನೀವು ಏತಕ್ಕೆ ಮಾತನಾಡುತ್ತೀರಿ ?

ಶ್ರೀ ವೈ.ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪ ಮೊಯ್ಲಿಯವರು ಒಬ್ಬ ಮಾನ್ಯ ಸದಸ್ಯರು ಪಕ್ಷಾಂತರ ಹೊಂದಿದ್ದಾರೆಂದು ಹೇಳಿದಾರೆ. ನಾನು ಈ ಸಭೆಗೆ ಹೊಸದಾಗಿ ಬಂದಿರತಕ್ಕಂಥ ಸದಸ್ಯನಾಗಿದ್ದೇನೆ. ಈ ಬಗ್ಗೆ ನನ್ನ ವೈಯಕ್ತಿಕ ವಿಷಯ ಏನಿದೆ ಎಂಬುದನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಯಾವ ವಿಚಾರವನ್ನು ಹೇಳುತ್ತೀರಿ ?

ಶ್ರೀ ವೈ.ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಉಗ್ರನರಸಿಂಹಪ್ಪನವರು ಜನತ್ ಪಕ್ಷಕ್ಕೆ ಪಕ್ಷಾಂತರ ಹೊಂದಿದ್ದಾರೆ ಎಂದು ಹೇಳಿದರು. ಮಾನ್ಯ ಸದಸ್ಯರು ನಮ್ಮ ಜಿಲೆಯ ಬಹಳ ಉತ್ತಮವಾದ ವ್ಯಕ್ತಿ, ಆಂತಹವರು ಸ್ವತಂತ್ರವಾಗಿ ಚುನಾವಣೆಯಲ್ಲಿ ಸ ರ್ಧಿಸಿ ಗೆದ್ದು ಒಂದು ಜನತಾ ಪಕ್ಷಕ್ಕೆ ಸೇರಿಕೊಂಡಿದ್ದಾರೆಯೇ ಹೊರತು ಅವರು ಪಕ್ಷಾಂತರ ಮಾಡಿಲ್ಲ ಎನ್ನತಕ್ಕಂಥ ವಿಚಾರವನ್ನು ನಾನು ಮಾನ್ಯ ವೀರಪ್ಪ ಮೊಯಿಲಿಯವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ರೂಲ್ ೬೦ರ ಪ್ರಕಾರ ನಾನು ಮತ್ತು ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾವೂ ಕೂಡ ಒಂದು ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದೇವೆ. ಆದರೆ ವಿಷಯ ಆದರದು ಅಲ್ಲ. 'ಮಾನ್ಯ ಸದಸ್ಯರು ಸ್ವತಂತ್ರವಾಗಿ ನಿಂತು ಗೆದ್ದು ಒಂದಿದ್ದಾರೆ' ಎಂಬ ಅಭಿಪ್ರಾಯವನ್ನು ನಮ್ಮ ಸ್ನೇಹಿತರು ಹೇಳಿದರು. ಆ ವಿಚಾರ ಹೌದೋ, ಅಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನಮ್ಮ ಜನತಾ ಪಕ್ಷದವರು ಅದನ್ನು ಒಪ್ಪಿಕೊಳ್ಳುತ್ತಾರೋ ಅಥವಾ ಇಲ್ಲವೋ ಅದೂ ಕೂಡ ನನಗೆ ಗೊತ್ತಿಲ್ಲ. ಹಾಗೆಂದು ಅವರು ಏನು ಹೇಳಿದ್ದಾರೆ ಅದು ಮಾನ್ಯ